ಓ.ಎಸ್. ನಂಃ 89/2020
ಡಿ.ಡಬ್ಲ್ಯೂ-2 (ಮಲ್ಲಿಕಾರ್ಜುನ)

ದಿನಾಂಕ: 05-06-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀಸವಾಲುಃ ಶ್ರೀ.ಎಸ್.ವಿ.ಡಿ. ವಾದಿ ಪರ ವಕೀಲರಿಂದಃ**

ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರಕ್ಕೆ ನಾನೇ ಮಾಹಿತಿ ಕೊಟ್ಟು ಬರೆಯಿಸಿದ್ದೇನೆ. ಈ ದಾವೆಯು ಅವಿನಾಶ ಜಾಧವ ಇವರು ಸಿದ್ದಪ್ಪ ಶಿಂಗಾಡಿ ಇವರ ಮೇಲೆ ಹೊಲದ ವಿಚಾರವಾಗಿ ಮಾಡಿರುತ್ತಾರೆ. ನಾನು ಮತ್ತು ಪ್ರತಿವಾದಿ ದೂರದ ಸಂಬಂಧಿಕರು ಎಂದರೆ ಸರಿ. ನಾನು ಈ ಮೊದಲು ತಲಾಟಿಯವರ ಬಳಿ ಗುಮಾಸ್ತನಾಗಿ ಕೆಲಸ ಮಾಡುತ್ತಿದ್ದೆ ಎಂದರೆ ಸರಿ. ನನಗೆ ದಾಖಲೆಗಳ ಬಗ್ಗೆ ಮಾಹಿತಿ ಇತ್ತು ಎಂದರೆ ಸರಿಯಲ್ಲ.

2. ಪ್ರತಿವಾದಿ ಖಾಯಂ ಆಗಿ ವಾದಿಯ ಬಂಗಾರದ ಅಂಗಡಿಯಿಂದ ಎಷ್ಟು ಸಲ ಬಂಗಾರ ಖರೀದಿ ಮಾಡಿದ್ದಾರೆ ಎಂದು ನನಗೆ ಗೊತ್ತಿಲ್ಲ. ಪ್ರತಿವಾದಿ ವಾದಿಯಿಂದ ರೂ.11,00,000/- 7-8 ವರ್ಷಗಳ ಹಿಂದೆ ಪಡೆದುಕೊಂಡಿದ್ದರು. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಪ್ರತಿವಾದಿ ವಾದಿಯಿಂದ ರೂ.3,44,000/- ಕೈಗಡ ಹಣ ಪಡೆದಿದ್ದರು ಎಂದು ಬರೆಯಿಸಿದ್ದೇನೆ ಎಂದರೆ ನನಗೆ ಮಾಹಿತಿ ಇಲ್ಲ. ಪ್ರತಿವಾದಿ ಉಪ-ನೋಂದಣಿ ಅಧಿಕಾರಿಗಳ ಕಚೇರಿಯಲ್ಲಿ ಎಷ್ಟು ದಾಖಲೆಗಳನ್ನು ಮಾಡಿಸಿಕೊಂಡಿದ್ದರು ಎಂದು ನನಗೆ ಗೊತ್ತಿಲ್ಲ. ಪ್ರತಿವಾದಿ ಮೊದಲಿನಿಂದಲೂ ಖರೀದಿ ಕರಾರ ಪತ್ರಗಳನ್ನು ಮಾಡಿಸಿಕೊಳ್ಳುವುದು, ರದ್ದು ಮಾಡಿಸಿಕೊಳ್ಳುವುದು ಅದರ ಪ್ರಕಾರ ತಲಾಟಿಯವರ ಬಳಿ ವರದಿ ಕೊಡುವುದು ಮಾಡಿಕೊಂಡು ಬಂದಿದ್ದಾರೆ ಎಂದರೆ ಸರಿಯಲ್ಲ.

3. ದಿನಾಂಕ 17/01/2019 ರಂದು ಪ್ರತಿವಾದಿ ವಾದಿಯಿಂದ ರೂ.11,00,000/- ಪಡೆದು ಒಂದು ಖರೀದಿ ಕರಾರ ಪತ್ರ ಮಾಡಿಕೊಟ್ಟಿದ್ದಾರೆ ಎಂದರೆ ಸರಿ. ಸದರಿ ಖರೀದಿ ಕರಾರ ಪತ್ರಕ್ಕೆ ನಾನು ಸಾಕ್ಷಿಯಾಗಿ ಸಹಿ ಮಾಡಿದ್ದೇನೆ ಎಂದರೆ ಸರಿ. ಈಗ ಸಾಕ್ಷಿದಾರರಿಗೆ ನಿಪಿ-2ನ್ನು ತೋರಿಸಿದ್ದು 2(ಸಿ) ಎಂದು ಗುರುತಿಸಿರುವ ಸಹಿ ತಮ್ಮ ಸಹಿ ಎಂದು ಸೂಚಿಸಿದರೆ ಸಾಕ್ಷಿದಾರರು ಒಪ್ಪಿಕೊಳ್ಳುತ್ತಾರೆ.

4. ನಿಪಿ-2 ರ ಪ್ರಕಾರ ಬಾಕಿ ಉಳಿದ ರೂ.1,00,000/- ಒಂದು ವರ್ಷದ ಒಳಗೆ ಪಡೆದು ಖರೀದಿ ಪತ್ರ ಬರೆದು ಕೊಡಬೇಕೆಂದು ಕರಾರು ಆಗಿತ್ತು ಎಂದರೆ ನನಗೆ ಗೊತ್ತಿಲ್ಲ. ಖರೀದಿ ಕರಾರ ಪತ್ರ ರದ್ದು ಮಾಡಿಕೊಡಿ ಎಂದು ಕೇಳಲು ಯಾವಾಗ ವಾದಿಯ ಬಳಿ ಹೋಗಿದ್ದೆವು ಎಂದು ನನಗೆ ನೆನಪಿಲ್ಲ. ನಾನು ಪ್ರತಿವಾದಿಗೆ ವಾದಿಯು ಖೊಟ್ಟಿ ದಾಖಲೆ ಬರೆಯಿಸಿಕೊಂಡಿದ್ದಾರೆ ಎಂದು ಹೇಳಿ ವಾದಿಯ ವಿರುದ್ಧ ನಾನು ದೂರು ಕೊಡಲು ಹೇಳಿಲ್ಲ. ವಾದಿ ದಾವೆ ಮಾಡಿದ ನಂತರ ನನಗೆ ಖರೀದಿ ಕರಾರ ಪತ್ರದ ಬಗ್ಗೆ ಗೊತ್ತಾಗಿರುತ್ತದೆ.

5. ನಿಪಿ-2 ರಂತೆ ಪ್ರತಿವಾದಿ ವಾದಿಗೆ ಖರೀದಿ ಕರಾರ ಪತ್ರ ಬರೆದುಕೊಟ್ಟಿದ್ದರೂ ಸಹ ಪ್ರತಿವಾದಿ ನನಗೆ ಸಂಬಂಧಿಕನಾಗಿದ್ದರಿಂದ ಪ್ರತಿವಾದಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ** ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಪ್ರಕಾರ ಬೆರಳಚ್ಚು ಮಾಡಲಾಗಿದೆ)

ಓ ಹೇ ಕೇ ಸರಿ ಇದೆ.

(ಉಮೇಶ ಎಸ್. ಅತನೂರೆ)
ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು
ಗೋಕಾಕ.

ಸಾಕ್ಷಿಯ ಸಹಿ